10ನೇ-ವರ್ಗ :- ಕನ್ನಡ ದ್ವಿತೀಯ ಭಾಷೆ -: 25-06-2020

33K III

-: ಉತ್ತರಗಳು :-

LITTLE HEARTS SCHOOL GANGAVATHI

I - ಸೂಕ್ತವಾದ ಉತ್ತರಗಳು ಆಯ್ಕೆಮಾಡಿ ಬರೆಯಿರಿ.

1. ಬಿ) ಗೂಡನ್ನು
2. ಎ) ಮಾತಿಲ್ಲ
3. ಸಿ) ಆಕಾಶ
4. ಡಿ) ಪಡುವಣ

II - ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.

5. ಇಂದ್ರನು ಗಿಳಿಯ ಆತ್ಮನಿಷ್ಠೆಯ [ಪರೋಪಕಾರಕ್ಕೆ] ಗುಣವನ್ನು ಮೆಚ್ಚಿಕೊಂಡನು.
6. ತಾಯಿ ಸಿದ್ಧಮ್ಮ ಮಗನನ್ನು [ಪುಟ್ಟರಾಜ] ಮನೆಗೆ ಕಳಿಸಿ ಕೊಡುವಂತೆ ಪಂಚಾಕ್ಷರಿ ಗವಾಯಿಗಳಲ್ಲಿ ಬೇಡಿಕೊಂಡಳು.
7. ಅಮೇರಿಕಾದಲ್ಲಿ 'ಗ್ಯಾನೆಟ್' ಎಂಬ ಹಕ್ಕಿ.
8. ಗುರುಗಳು ಜೀವನವನ್ನು ಕಾಶಿಗೆ ಹೋಲಿಸಿದ್ದಾರೆ.
9. "ಟು ಸ್ಟೋನ್" ಎಂಬ ಹೆಸರಿನಿಂದ ಕರೆಯುತ್ತಾರೆ.
10. ಗೋಪಾಲನ ಗೆಳೆಯರು ಬೆಲೆಬಾಳುವ ಬಟ್ಟೆ ಹಾಕಿಕೊಂಡು. ಹರಿದ ಅಂಗಿ ಹಾಕಿಕೊಳ್ಳುತ್ತಿದ್ದ ಗೋಪಾಲನನ್ನು ಹಾಸ್ಯ ಮಾಡುತ್ತಿದ್ದರು.
11. ಯುಗಾದಿ ಬಂದಾಗ.
12. ಅಳಿಯಂದಿಗಳ ಸುಳಿಗೆ ಸಿಲುಕಿ. ನಿರ್ದಿಷ್ಟ ಗುರಿ ಇಲ್ಲದೆ ಇರುವಾಗ.
13. ಬಾಳೆ ಹಣ್ಣಿನ ಸಂತೆ.
14. "ದಯೆ"
15. ಕೌರವರ ಸೈನ್ಯ
16. ಇಂದ್ರ ಪದವಿಗಿಂತ. ಜೀವ ಉಳಿಸಿ ಕೊಂಡು ಬದುಕುವುದು ಉತ್ತಮ. ಎಂದು

Scanned with CamScanner

## III – ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

17. ರೈತರು ಉಳುವುದನ್ನು ಬಿಟ್ಟು ಸತ್ಯಾಗ್ರಹ ಮಾಡಿದರೆ. ಆಹಾರವಿಲ್ಲದೆ ಜನರು ಪರಿತಪಿಸಬೇಕಾಗುತ್ತದೆ. ನಾವು ಯಾವ ಕಾರ್ಖಾನೆಯಿಂದಲೂ ಕಾಳುಕಡಿ ತಯಾರಿಸಲು, ಅಕ್ಕಿ, ರಾಗಿ ಬೆಳೆಯಲು ಸಾಧ್ಯವಿಲ್ಲ.

18. ಅಸಿಗಿಂತ ಮಸಿ ಶ್ರೇಷ್ಠ. ಶಿಕ್ಷಣ ಎಂದರೆ ಸಾಹಿತ್ಯ ರಚನೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಮಾತಿನಂತೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು, ಪೆನ್ನಿನ ಮೂಲಕ ಸಾಧಿಸಬಹುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ. ಕತೆ. ಕವನ. ಹಲವರ ಬದುಕನ್ನು ಬದಲಾಯಿಸಬಹುದು.. ಒಂದು ಸರ್ಕಾರ ಉರುಳಿಸಿ. ಮತ್ತೊಂದು ಸರ್ಕಾರ ತರಬಹುದು. ಬರವಣಿಗೆ ಹೆಚ್ಚು ಶಕ್ತಿಶಾಲಿ.

19. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶ ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ. ಬಿರುಗಾಳಿ. ಮಳೆ. ಪ್ರವಾಹಗಳಿಂದ ರಕ್ಷಿಸಿಕೊಂಡು ಬದುಕಲು. ಹಕ್ಕಿಗಳಿಗೆ ಗೂಡು ಬೇಕು. ಅಲ್ಲದೆ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು, ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು. ಹಕ್ಕಿಗಳು ಗೂಡುಗಳನ್ನು ನಿರ್ಮಿಸುತ್ತವೆ.

20. ಲೇಖಕರು 'ಚೇಂಬರ್ ಆಫ್ ಹಾರರ್ಸ್' ನ ಬಳಿಗೆ ಹೋದಾಗ ಒಬ್ಬರ ಮೇಲೆ ಕತ್ತಿ ಹಿಡಿದು ಆಕ್ರಮಣ ಮಾಡಲು ಒಬ್ಬ ಬಂದವನಂತೆ. ಒಬ್ಬ ಕತ್ತು ಹಿಚುಕಲು ಬಂದವನಂತೆ. ವಿಕಾರವಾಗಿ ಕಿರುಚುತ್ತಾ. ಹೊಟ್ಟೆಗೆ ಡ್ಯಾಗರ್ ತಿವಿಯಲು ಬಂದಂತೆ ಮಾಡಿದಾಗ ಲೇಖಕರು ಅಂಜಿಹೋದರು.

---

ಶ್ರೀ ನೀಲಕಂಠ ಅರಹುಣಸಿ
ಕನ್ನಡ ಶಿಕ್ಷಕರು.
ಲಿಟಲ್ ಹಾರ್ಟ್ಸ್ ಸ್ಕೂಲ್ – ಗಂಗಾವತಿ

LITTLE HEARTS SCHOOL GANGAVATHI

Scanned with CamScanner

21. ಚೈತ್ರದಲ್ಲಿ ಆದ ಪ್ರಕೃತಿ ಬದಲಾವಣೆಯಿಂದ. ಪ್ರಾಣಿ-ಪಕ್ಷಿಗಳು ಎಚ್ಚೆತ್ತೊಡನೆ ಲಗುಬಗೆಯ ಕೆಲಸಕ್ಕೆ ಹೋಗುವಂತೆ. ತೋರುತಿದವು.

22. ಮೂಡಲ ದಿಕ್ಕಿನಲ್ಲಿರುವ ಕುಣಿಗಲ್ ಕೆರೆ ನೋಡುವವರಿಗೆ ಒಂದು ವಿಭೋಗ. ರಾತ್ರಿ ಚಂದಿರ ಆ ಕೆರೆಯಲ್ಲಿ ಮೂಡಿ ಬರುತ್ತಾನೆ. ಕುಣಿಗಲ್ ಕೆರೆ ತುಂಬಿ ನೋಡಲು ಮನೋಹರವಾಗಿದೆ. ಬಾಳೆ ಹಣ್ಣಿನಂತೆ ಬಾಗಿದೆ. ನಿಂಬೆ ಹಣ್ಣು ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ ಸುಂದರತೆಯನ್ನು ನೋಡಲು ಶಿವ ಬಂದ ಎನ್ನುವ ವರ್ಣನೆ ಇದೆ.

23. ವೈದ್ಯರು ಜ್ವರದಿಂದ ಬಳಲುತ್ತಿದ್ದ ಭೀಮನಾಯಕನ ಮಗನನ್ನು. ತಮ್ಮ ವೈದಿಕ ಜ್ಞಾನದಿಂದ ಬದುಕಿಸಿಕೊಟ್ಟರು. ಆಗ ಭೀಮನಾಯಕನು ವೈದ್ಯರಿಗೆ ಕೃತಜ್ಞತೆ ಸಲ್ಲಿಸಲು. ಅವರ ಮನೆಯಿಂದ ಕದ್ದ ವಸ್ತುಗಳನ್ನು ಮರಳಿ ತಂದು. ದೇವರ ಒಡವೆಗಳನ್ನು. ದೇವರಿಗೆ ಒಪ್ಪಿಸಲು ಬಂದಿದ್ದೇನೆ. ನನ್ನನ್ನು ಕ್ಷಮಿಸಿ ಎಂದು. ವಸ್ತುಗಳನ್ನು ಒಪ್ಪಿಸಿದನು.

24. ಬಣ್ಣ ಬಣ್ಣದ ಚಿಟ್ಟೆ ಹಾರಿ. ಭೃಂಗದ ಸಂಗೀತ ಕೇಳಿ ಬರುತ್ತೆ. ಜೊತೆಗೆ ಹೂವ ಹಾಸಿಗೆಯ ಘಮಲಿನಲಿ. ನಾಳೆ ಎಂಬ ಜ್ಯೋತಿಷ್ಯ, ಬದುಕು ಅರಳಿದೆ. ಎಂದು ಖುಷಿ ಪಡುತ್ತಾರೆ. ಕವಯಿತ್ರಿ.

25. ಕುವೆಂಪು.

ಕುವೆಂಪುರವರ ಪೂರ್ಣ ಹೆಸರು!
ಕುಪ್ಪಳಿ ವೆಂಕಟಪ್ಪ. ಪುಟ್ಟಪ್ಪ
೨೯-೧೨-೧೯೦೪ ರಂದು ಶಿವಮೊಗ್ಗ ಜಿಲ್ಲೆಯ. ತೀರ್ಥಹಳ್ಳಿ ತಾಲೂಕಿನ. ಕುಪ್ಪಳಿ ಎಂಬ ಹಳ್ಳಿಯಲ್ಲಿ ಜನನ
ಕೃತಿಗಳು!. ನವಿಲು. ಪಕ್ಷಿಕಾಶಿ, [ಕವನ ಸಂಕಲನ.
ಬೆರಳ್‌ಗೆ ಕೊರಳ್, 'ಶೂದ್ರ ತಪಸ್ವಿ', ಜಲಗಾರ [ನಾಟಕಗಳು]
ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು.
ಶ್ರೀರಾಮಾಯಣ ದರ್ಶನಂ. 'ರಾಷ್ಟ್ರಕವಿ' ಬಿರುದು. ಜ್ಞಾನಪೀಠ ಪ್ರಶಸ್ತಿ
[ ನನ್ನ ಗೋಪಾಲ ಪಾಠದಲ್ಲಿ ನೋಡುವುದು ]

Scanned with CamScanner

## V - ಪದ್ಯದ ಸಾರಾಂಶ.

26. ಈ ಪ್ರಸ್ತುತ ಪದ್ಯದ ನುಡಿಯನ್ನು. ಬಸವಣ್ಣನವರು ಬರೆದ ವಚನಗಳಿಂದ ಆಯ್ದುಕೊಳ್ಳಲಾಗಿದೆ.

ಈ ಪದ್ಯದಲ್ಲಿ ಬಸವಣ್ಣನವರು ಜನರ ಮೂಢನಂಬಿಕೆಯ ಆಚರಣೆಗಳನ್ನು ಖಂಡಿಸಿದ್ದಾರೆ. ಜನರು ನೀರನ್ನು ಕಂಡಲ್ಲಿ ಮುಳುಗುವವರು, ಮರ ಕಂಡಲ್ಲಿ ಅದನ್ನೆ ದೇವರೆಂದು ಸುತ್ತುವರು. ಬತ್ತುವ ಜಲವ, ಒಣಗುವ ಮರವನ್ನು ಮೆಚ್ಚಿದವರು. ನಿಜವಾದ ದೇವರ ಸ್ವರೂಪವನ್ನು ಹೇಗೆ ತಿಳಿದಾರು? ಎಂದು ಹೇಳುತ್ತ ಅರ್ಥವಿಲ್ಲದ ಆಚರಣೆಯನ್ನು ಬಿಡುವಂತೆ ಪ್ರಸ್ತುತವಾಗಿ ಹೇಳಿದ್ದಾರೆ.

## VI - ಅಲಂಕಾರ

27. ಪ್ರಸ್ತುತ ವಾಕ್ಯವು ಉಪಮಾಲಂಕಾರದಲ್ಲಿದೆ.

ಉಪಮಾನ:- ಬಾಳೆಹಣ್ಣು
ಉಪಮೇಯ:- ಕುಣಿಗಲ್ ಕೆರೆ
ಉಪಮಾವಾಚಕ:- ಅಂತೆ
ಸಮಾನ ಧರ್ಮ:- ಬಾಗುವಿಕೆ

ಇಲ್ಲಿ ಉಪಮೇಯ ಕುಣಿಗಲ್ ಕೆರೆಯನ್ನು ಉಪಮಾನ ಬಾಳೆಹಣ್ಣಿಗೆ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರದಲ್ಲಿದೆ.

## VII - ಗಾದೆ ಮಾತು.

28. -: ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು :-

ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸಾರ್ವಕಾಲಿಕ ಸತ್ಯವನ್ನು ಹೇಳುತ್ತವೆ. ದೇಶದ ಪ್ರಗತಿಯಲ್ಲಿ ಕೃಷಿಯ ಪಾತ್ರ ಹಿರಿದಾದುದು. ಕೃಷಿ ಕೆಲಸವನ್ನು ಕೈಗೊಳ್ಳುವ ರೈತ, ಬಿತ್ತಿ-ಬೆಳೆದು ನಮಗೆಲ್ಲರಿಗೂ ಆಹಾರ ಧಾನ್ಯ ನೀಡಿ, ದೇಶದ ಜನರನ್ನು ಉಪವಾಸದಿಂದ ಮುಕ್ತಗೊಳಿಸುತ್ತಾನೆ. ಅನ್ನದಾನ ಮಾಡುತ್ತಾನೆ. ಕೃಷಿಕರೇನಾದರು ಸತ್ಯಾಗ್ರಹ ಮಾಡಿ, ನಾವು ಭೂಮಿಯನ್ನು ಉಳುವುದಿಲ್ಲ, ಬೆಳೆ ಬೆಳೆಯುವುದಿಲ್ಲ ಎಂದರೆ, ದೇಶದ

Scanned with CamScanner

ಜನರ ಗತಿ ಏನಾಗುತ್ತದೆ. ಆಹಾರವಿಲ್ಲದೆ ಪರಿತಪಿಸಿ ಬೇಕಾಗುತ್ತದೆ. ಯಾವ ಕಾರ್ಖಾನೆಯಿಂದ ತರಕಾರಿಗಳನ್ನು ತಯಾರಿಸಲು ಸಾಧ್ಯವಿಲ್ಲ, ಅಕ್ಕಿ, ಬೇಳೆ, ರಾಗಿ, ಇತ್ಯಾದಿ ಆಹಾರ ಧಾನ್ಯಗಳನ್ನು ಬೆಳೆಯಲು ಸಾಧ್ಯವಿಲ್ಲ. ಇವೆಲ್ಲ ಭೂಮಿಯಲ್ಲೇ ಬೇಕು, ರೈತನ ಬೆವರು ಭೂಮಿಗೆ ಸುರಿಯಬೇಕು. ವಿಜ್ಞಾನ-ತಂತ್ರಜ್ಞಾನ ಎಷ್ಟು ಮುಂದುವರೆದರೂ. ಆಹಾರವಿಲ್ಲದೆ ಬದುಕಲು ಅಸಾಧ್ಯ. ಆದ್ದರಿಂದ ಕೃಷಿಕನೇ ಈ ನಾಡಿನ ಬೆನ್ನೆಲುಬು. ಕೃಷಿಯು ಮಹತ್ವ ಅಳಿಸುವ ಗಾದೆ ಮಾತು ಇದಾಗಿದೆ.

## VIII – ಸಂದರ್ಭ ವಿವರಿಸಿ.

29. ಪ್ರಸ್ತುತ ವಾಕ್ಯವನ್ನು ಅ.ರಾ. ಮಿತ್ರ ಬರೆದಿರುವ ಒಣಮರದ ಗಿಳಿ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನು ಇಂದ್ರನು ಗಿಳಿಗೆ ಕೇಳಿದನು.

ಸಂದರ್ಭ:- ಮರ ಒಣಗಿ ನಿಂತರೂ ಗಿಳಿ ಆ ಮರದ ಪೊಟರೆಯನ್ನು ಬಿಟ್ಟು ಹೋಗದೆ. ಅಲ್ಲೇ ವಾಸವಾಗಿತ್ತು. ಅಲ್ಲಿ ಸಂಚರಿಸುತ್ತಿದ್ದ ಇಂದ್ರನು. ಒಣಮರದಲ್ಲಿ ಗಿಳಿ ವಾಸವಾಗಿರುವುದನ್ನು ಕಂಡು ಆಶ್ಚರ್ಯವಾಯಿತು. ಆಗ ಗಿಳಿಯನ್ನು ಕರೆದು ಈ ಪ್ರಶ್ನೆಯನ್ನು ಕೇಳಿದನು.

30. ಪ್ರಸ್ತುತ ವಾಕ್ಯವನ್ನು ಕಮೀಶಗಾದ ಹಲ್ಲಿನಗಾದ ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನು ಪುಟ್ಟರಾಜರ ಸೋದರಮಾವ ಚಂದ್ರಶೇಖರಯ್ಯನವರು ಈ ಮಾತನ್ನು ಹೇಳಿದರು.

ಸಂದರ್ಭ! ಒಂದು ದಿನ ಪುಟ್ಟರಾಜರು ತನ್ನ ಮಾವನ ಹಾರ್ಮೋನಿಯಂನ್ನು ಅವರಿಲ್ಲದಾಗ. ತಲ್ಲೀನರಾಗಿ ನುಡಿಸುತ್ತಿದ್ದರು. ಅದರ ನಾದದ ಮಾಧುರ್ಯದಿಂದ ಅಕ್ಕಪಕ್ಕದ ಮನೆಯವರೆಲ್ಲ. ನಿಂತು ನೋಡುತ್ತಿದ್ದರು. ಇದನ್ನು ಕಂಡ ಸೋದರಮಾವ ಒಳಗೆ ಬಂದರು. ಇದನ್ನು ಗಮನಿಸಿದ ಪುಟ್ಟರಾಜ. ತಪ್ಪಾಯಿತು ಮಾವ. ಇನ್ನು ಮುಂದೆ

Scanned with CamScanner

ನಿಮ್ಮ ಹಾರ್ಮೋನಿಯಂ ನನ್ನ ಮುಟ್ಟುವುದಿಲ್ಲ ಎಂದಾಗ,
ಸೋದರ ಮಾವ ಈ ಮಾತನ್ನು ಹೇಳುತ್ತಾರೆ.

31. ಪ್ರಸ್ತುತ ವಾಕ್ಯವನ್ನು ಡಾ|| ಗುರುರಾಜ ಕರಜಗಿ ಯವರು ಬರೆದ "ರಾಗಿ ರೊಟ್ಟಿ" ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಹೆಡ್‌ಮಾಸ್ತರರು ತಮ್ಮ ಹಳೆಯ ಶಿಕ್ಷಕರಿಗೆ ಹೇಳಿದರು.

ಸಂದರ್ಭ:- ಹೆಡ್‌ಮಾಸ್ತರರು ಬಿಸಿ-ಬಿಸಿ ರಾಗಿಯನ್ನು ಆರ್ಡರ್ ಮಾಡಿಕೊಂಡು ತಂದರು ಬಂದೆರಡು ಟ್ರೇನಲ್ಲಿ ಸುಮಾರು 30-35 ರೊಟ್ಟಿ ಕೂಡ ತಂದಿಟ್ಟರು. ಬಂದಿದ್ದ ಹುಡುಗರು ಕೇವಲ ಹದಿನೈದು ಜನ. ಆಗ ಹೆಡ್‌ಮಾಸ್ತರರು ರೊಟ್ಟಿ ಮತ್ತು ರಾಗಿ ತಂದಿಟ್ಟು. ತನ್ನ ಹಳೆಯ ವಿದ್ಯಾರ್ಥಿಗಳಿಗೆ ನೀವೇ ರಾಗಿ ಹಂಚಿಕೊಳ್ಳಿ. ಆಮೇಲೆ ಕುಳಿತು ಮಾತನಾಡೋಣ ಎಂದರು.

32. ಪ್ರಸ್ತುತ ವಾಕ್ಯವನ್ನು 'ಸುಕನ್ಯ ಮಾರುತಿ' ಯವರು ಬರೆದ 'ಏಣಿ' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಏಣಿಯು ಜನ ನಿಮ್ಮನ್ನ ಭಾರ ಹೊರುವಾಗ ಈ ವಾಕ್ಯವನ್ನು ಹೇಳುತ್ತದೆ.

ಸಂದರ್ಭ!- ಏಣಿಯು, ತನ್ನಿಂದ ಸಹಾಯವನ್ನು ಪಡೆದು ಮೇಲೇರಿದವರು ಸುಖವಾಗಿರುತ್ತಾರೆ. ಬಂದೊಂದು ಹೆಜ್ಜೆಯ ಭಾರವನ್ನು ಹೊರುವಾಗ ನನ್ನ ಪಾಡು ನನಗೆ ಗೊತ್ತು. ತನ್ನ ಸಹಾಯದಿಂದ ಅವಲಂಬಿಯಾಗಿ ಮೇಲೇರಿದವರಿಗೆ ನನ್ನ ಕಾಳಜಿಯೇ ಇಲ್ಲ. ಅವ ಭಾರ ಹೊತ್ತು ಗಟ್ಟಿನೆಲದಲ್ಲಿ ಕಾಲೂರಿ ನಿಂತ ಏಣಿಗೆ ಬೀಳುವ ಭಯವಿಲ್ಲ ಎಂದು ಹೇಳುತ್ತದೆ.

ಶ್ರೀ ನೀಲಕಂಠ ಓರಡ್ಗಾನಿ
ಕನ್ನಡ ಶಿಕ್ಷಕರು
ಅಟಲ್ ಹಾಯ್ಸ್ಕೂಲ್ – ಗಂಗಾವತಿ

Scanned with CamScanner

33. ಪ್ರಸ್ತುತ ವಾಕ್ಯವನ್ನು ಎಂ.ಗೋಪಾಲಕೃಷ್ಣ ಅಡಿಗರು ಬರೆದ 'ಗುರಿ' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:- ಈ ಮಾತನ್ನು ಕವಿಗಳು ಗುರಿಯ ನಿರ್ದಿಷ್ಟತೆ ಬಗ್ಗೆ ತಿಳಿಸುತ್ತಾ ಈ ಮಾತನ್ನು ಹೇಳಿದ್ದಾರೆ.
ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ. ಒಂದು ದೇಹದಲ್ಲಿ ಒಂದೇ ಆತ್ಮ ಇರುವಂತೆ. ಈ ಜೀವನದಲ್ಲಿ ಅವಕಾಶವು ಒಂದೇ ಬಾರಿ ಸಿಗುತ್ತದೆ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಎಂದು ತಿಳಿಸುತ್ತಾ ಈ ಮಾತನ್ನು ಹೇಳಿದ್ದಾರೆ. ಒಂದೇ ಹೆಗ್ಗುರಿ ಹೊಂದಬೇಕು ಹಾಗಿರಬೇಕು ಎಂದು ಹೇಳಿದ್ದಾರೆ.

IX - ಪದ್ಯ ಪೂರ್ಣಗೊಳಿಸಿರಿ.

34. ವರಾಂಗಿ ಬೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹಿಂದುದಾಕಿ ಹೋದನು.
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

LITTLE HEARTS SCHOOL GANGAVATHI

ಶ್ರೀ ನೀಲಕಂಠ ಕರಡುಗಾನಿ
ಕನ್ನಡ ಶಿಕ್ಷಕರು
ಲಿಟಲ್ ಹಾರ್ಟ್ಸ್ ಶಾಲೆ- ಗಂಗಾವತಿ

Scanned with CamScanner

X - ಎಂಟು - ಹತ್ತು ವಾಕ್ಯದಲ್ಲಿ ಉತ್ತರಿಸಿರಿ.

35. ಆಡಂಬರ, ಪ್ರದರ್ಶನ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ. ಸಂಪತ್ತು, ಪದವಿ, ಕೀರ್ತಿ ಇವುಗಳನ್ನು ಪಡೆಯುವುದೇ ಜೀವನದ ಸಾರ್ಥಕ್ಯವೆಂದು ಬಹಳಷ್ಟು ಮಂದಿ ತಿಳಿದಿದ್ದಾರೆ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಪ್ರದರ್ಶನವಿಲ್ಲದೆ ತನ್ನಲ್ಲಿ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು. ಕಾಮನ ಬಿಲ್ಲು ಗೋಚರವಾಗುವುದು. ಪುಷ್ಪವು ಅರಳಿ ಪರಿಮಳ ಸೂಸುವುದು. ಕಾಯಿಗಳು, ರಸಭರಿತ ಹಣ್ಣಾಗುವುದು. ಇಂತಹ ನೂರಾರು ಅದ್ಭುತ ರಮ್ಯಗಳು ಪ್ರಕೃತಿಯಲ್ಲಿ ನಿತ್ಯ ನಿರಂತರವಾಗಿರುತ್ತವೆ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿದ್ದಿಲ್ಲ. ಆದರೆ ಮಾನವ ಸಣ್ಣ ಕೆಲಸವನ್ನು ದೊಡ್ಡದಾಗಿ ತನ್ನಿಂದಲೇ ಸಾಧ್ಯವಾಗಿದ್ದು ಎಂದು ಪ್ರಚಾರ ಮಾಡಿಕೊಳ್ಳುತ್ತಾನೆ. ಹೀಗಾಗಿ ಮಾನವ ತನ್ನ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ಕರ್ತವ್ಯವನ್ನು ಮೌನವಾಗಿ ಮಾಡಿ ಮುಗಿಸಬೇಕು. ಎನ್ನುವ ಸಂದೇಶವನ್ನು ನಾನು ಮೆಚ್ಚುತ್ತೇನೆ.

---

ಶ್ರೀ ನೀಲಕಂಠ ಅರಳುಪ್ಪಿ
ಕನ್ನಡ ಶಿಕ್ಷಕರು
ಲಿಟಲ್ ಹಾರ್ಟ್ಸ್ ಸ್ಕೂಲ್ - ಗಂಗಾವತಿ

Scanned with CamScanner

# XI – ಗದ್ಯಭಾಗ [passage]

36.

ಅ) ಲಾಲ್‌ಬಾಗ್ ಕಂಡಾಗ ನಿಸರ್ಗ ಕಲಾರಾಧಕರಿಗೆ ಅದರ ಚಲುವನ್ನು ಹೀರಿ ಆನಂದಿಸಬೇಕೆಂದು ಅನಿಸುತ್ತದೆ. ಅವರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ. ಪುಳಕಿತರಾಗುತ್ತಾರೆ. ಪ್ರತಿನಿತ್ಯ ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ಅದರ ಸೌಂದರ್ಯರಾಶಿಯಲ್ಲಿ ಮಿಂದು ಪುನೀತರಾಗುತ್ತಾರೆ.

ಆ) ರಾಷ್ಟ್ರದ ಬಂಜರು ಭೂಮಿಯ ನಿಗುವಳಿ ಅತ್ಯಗತ್ಯ ಎಂಬುದನ್ನು ಮೊಟ್ಟಮೊದಲಬಾರಿಗೆ ತೋರಿಸಿಕೊಟ್ಟರು. ಅಲ್ಲದೆ ಆಧುನಿಕ ಪ್ರಗತಿಗೆ, ವಾಣಿಜ್ಯಾಭಿವೃದ್ಧಿಗೆ, ಅಂತರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ದಾರಿಯಾಗುತ್ತವೆ. ಎಂಬ ಅಂಶವನ್ನು ಮರಿಗೌಡರು ತಿಳಿಸಿಕೊಟ್ಟರು. ಇದರಿಂದ ಅವರು ಭರತ ಖಂಡದ ತೋಟಗಾರಿಕೆ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ.

LITTLE HEARTS SCHOOL GANGAVATHI

ಶ್ರೀ ನೀಲಕಂಠ ಅರಳುಣಸಿ
ಕನ್ನಡ ಶಿಕ್ಷಕರು
ಲಿಟಲ್ ಹಾರ್ಟ್ಸ್ ಸ್ಕೂಲ್ – ಗಂಗಾವತಿ

Scanned with CamScanner

XII – ಪ್ರಬಂಧ.

## 37. ಅರಣ್ಯ ಸಂರಕ್ಷಣೆ.

ಅರಣ್ಯಗಳ ಸಂರಕ್ಷಣೆ ಅತಿ ಮುಖ್ಯವಾಗಿದೆ. ಕಾಡು ಇದ್ದರೆ ನಾಡು. ಅರಣ್ಯಗಳು ಮಳೆ ಬೀಳಲು ಸಹಾಯಕವಾಗಿವೆ. ಗಿಡ-ಮರಗಳು ಮಣ್ಣಿನ ಸವಕಳಿಯನ್ನು ತಪ್ಪಿಸಿ, ಮಣ್ಣಿನ ಫಲವತ್ತತೆಯನ್ನು ಉಳಿಸುತ್ತವೆ. ಅತ್ಯ ಅಮೂಲ್ಯವಾದ ಅರಣ್ಯವನ್ನು ಸಂರಕ್ಷಣೆ ಮಾಡದೇ ಹೋದರೆ ಮಾನವ ಜನಾಂಗಕ್ಕೆ ಕಷ್ಟ ಕಟ್ಟಿಟ್ಟಬುತ್ತಿ.

ಅದಕ್ಕೆ ಅರಣ್ಯವನ್ನು ನಾವೆಲ್ಲರೂ ಸಂರಕ್ಷಣೆ ಮಾಡಬೇಕು. ಹೊಸ ಹೊಸ ಗಿಡ-ಮರಗಳ ಸಸಿಗಳನ್ನು ನೆಟ್ಟು ವನವನ್ನು ದಟ್ಟ ದಟ್ಟ ಬೆಳೆಸಬೇಕು. ಗುಡ್ಡ-ಬೆಟ್ಟಗಳಲ್ಲಿ ಹೊಸದಾಗಿ ಅರಣ್ಯಗಳನ್ನು ಹಬ್ಬಿಸಬೇಕು. ಹುಟ್ಟುಹಬ್ಬ, ಮದುವೆ ಇತ್ಯಾದಿ ಸಂದರ್ಭಗಳಲ್ಲಿ ಅದರ ನೆನಪಿಗಾಗಿ ಸಸಿಗಳನ್ನು ನೆಟ್ಟು ಪೋಷಿಸುವ ಆಚರಣೆ ಬರಬೇಕು. ಅಲ್ಲದೆ ಈ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಅರಣ್ಯಗಳು ಅತ್ಯವಶ್ಯಕವಾಗಿವೆ. ದಟ್ಟ ದಟ್ಟ ಗಿಡ-ಮರಗಳು ಇದ್ದಷ್ಟು ಅವು ಪರಿಸರವನ್ನು ಶುದ್ಧ ಮಾಡಿ, ಶುದ್ಧ ಗಾಳಿಯನ್ನು ನೀಡುತ್ತವೆ. ಅರಣ್ಯಗಳು ದೇಶದ ಸಂಪತ್ತು. ಮರಗಿಡಗಳನ್ನು ಮಕ್ಕಳಂತೆ ಪೋಷಿಸಿ ಬೆಳೆಸಬೇಕು. ಇದರಿಂದ ಮುಂದಿನ ಮಾನವ ಜನಾಂಗ ಸುರಕ್ಷಿತವಾಗಿರುತ್ತದೆ.

[ಎರಡರಲ್ಲಿ ಒಂದು ಪ್ರಬಂಧ ಬರೆಯುವುದು]

Scanned with CamScanner

XIII — ಪತ್ರಲೇಖನ

38. ಇವರಿಂದ, ದಿ:- 25-06-2020

ರವಿ
೧೦ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ತುಮಕೂರು.

ಇವರಿಗೆ,
ಮುಖ್ಯ ವೈದ್ಯಾಧಿಕಾರಿಗಳು
ಆರೋಗ್ಯ ಇಲಾಖೆ
ತುಮಕೂರು

ಮಾನ್ಯರೇ,

ವಿಷಯ:- ನಮ್ಮ ಶಾಲೆಯಲ್ಲಿ ಆರೋಗ್ಯ ತಪಾಸಣೆ ಕೈಗೊಳ್ಳುವ ಕುರಿತು ಪತ್ರ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಶಾಲೆಯ ವಿದ್ಯಾರ್ಥಿಗಳು ಒಂದಿಲ್ಲೊಂದು ಸಾಮಾನ್ಯ ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಅಲ್ಲದೆ ಪ್ರಸ್ತುತವಾಗಿ ಹರಡಿರುವ ಈ ಕರೋನ ರೋಗ ಬಾರದಂತೆ ತಡೆಯಲು ಅನೇಕ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ತಮ್ಮ ವೈದ್ಯರ ತಂಡವು ಒಂದು ದಿನ ನಮ್ಮ ಶಾಲೆಗೆ ಬಂದು ಎಲ್ಲ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಿ, ಸಾಂಕ್ರಾಮಿಕ ರೋಗನಿರೋಧಕ ಶಕ್ತಿ ಹೆಚ್ಚಿಸುವಂತೆ ಮಾತ್ರೆ, ಔಷಧಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕೆಂದು ಕೋರಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ
ರವಿ.

[ಯಾವುದಾದರೊಂದು ಪತ್ರ ಬರೆಯುವುದು]

Scanned with CamScanner